ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE 29/12/2017

### ಉಳಿದ ಹಣ ವಾಪಸ್ ಆದೇಶದಿಂದ ಶಾಸಕರಿಗೆ ವಿನಾಯ್ತಿ ನೀಡಿದ ಸಮಾಜ ಕಲ್ಯಾಣ ಇಲಾಖೆ

# ₹100 ಕೋಟಿ ಶಾಸಕರ ನಿಧಿ ಬಳಕೆಗೆ ಮುಕ್ತ

■ **ರಾಘವೇಂದ್ರ ಭಟ್** ಬೆಂಗಳೂರು
raghavendra.bhat@timesgroup.com

ಪ್ರಸಕ್ತ ಹಣಕಾಸು ವರ್ಷದಲ್ಲಿ ಖರ್ಚಾಗದೇ ಉಳಿದಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡ ವಿಶೇಷ ಉಪಯೋಜನೆ (ಎಸ್‌ಸಿಪಿ, ಟಿಎಸ್‌ಪಿ) ಹಣವನ್ನು ಇಲಾಖೆಗೆ ಹಿಂತಿರುಗಿಸಲು ನೀಡಿದ್ದ ಸೂಚನೆಯಿಂದ 'ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ'ಗೆ ವಿನಾಯಿತಿ ನೀಡಲಾಗಿದ್ದು, ಬಾಕಿ ಉಳಿದಿರುವ 100 ಕೋಟಿ ರೂ. ಅನ್ನು ಮುಂದಿನ ವರ್ಷದವರೆಗೂ ಬಳಸಿಕೊಳ್ಳುವುದಕ್ಕೆ ಸಮಾಜ ಕಲ್ಯಾಣ ಇಲಾಖೆ ಅವಕಾಶ ನೀಡಿದೆ.

ಎಲ್ಲ ಇಲಾಖೆಗಳಿಂದ ಸೇರಿ ಎಸ್‌ಸಿಪಿ,ಟಿಎಸ್‌ಪಿಗೆ ಈ ವರ್ಷ 30,445 ಕೋಟಿ ರೂ. ಒದಗಿಸಲಾಗಿತ್ತು. ಆದರೆ ಶೇ.39ರಷ್ಟು ಮಾತ್ರ ಬಳಕೆಯಾಗಿದ್ದು, 18,584 ಕೋಟಿ ರೂ. ಖರ್ಚಾಗಿರಲಿಲ್ಲ. ಇದನ್ನು ವಾರದೊಳಗಾಗಿ ಹಣಕಾಸು ಇಲಾಖೆಗೆ ಹಿಂತಿರುಗಿಸಿ ಮುಂದಿನ ಮೂರು ತಿಂಗಳ ಅವಧಿಗೆ ಮರು ನಿಯೋಜನೆ ಮಾಡಿಕೊಳ್ಳುವಂತೆ ಸಮಾಜ ಕಲ್ಯಾಣ ಸಚಿವ, ಡಿಸಿಎಂ ಗೋವಿಂದ ಕಾರಜೋಳ ಈಗಾಗಲೇ ಆದೇಶ ನೀಡಿದ್ದಾರೆ.

ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ಆಯಾ ವರ್ಷವೇ ಖರ್ಚು ಮಾಡಬೇಕೆಂಬ ನಿಯಮವಿದೆ.



**ವಿವಾದವೇಕೆ ?**

**ಎಸ್‌ಸಿಪಿ, ಟಿಎಸ್‌ಪಿ ಹಣ ಪ್ರತಿ ವರ್ಷ ಸದ್ಬಳಕೆಯಾಗುತ್ತಿಲ್ಲ ಎಂದು ಶಾಸಕರು ಪ್ರತಿ ಬಾರಿಯೂ ವರ್ಷಾಂತ್ಯದಲ್ಲಿ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಆದರೆ ತಮ್ಮ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿನ ಎಸ್‌ಸಿಪಿ, ಟಿಎಸ್‌ಪಿ ಪಾಲನ್ನು ಬಳಕೆ ಮಾಡಿಕೊಳ್ಳುತ್ತಿಲ್ಲ. ಪ್ರತಿ ವರ್ಷ ಕ್ಷೇತ್ರದ ಅಭಿವೃದ್ಧಿಗಾಗಿ ಶಾಸಕರಿಗೆ 2 ಕೋಟಿ ರೂ. ನೀಡಲಾಗುತ್ತದೆ. ಈ ಪೈಕಿ 100 ಕೋಟಿ ರೂ. ಎಸ್‌ಸಿಪಿ, ಟಿಎಸ್‌ಪಿ ಬಾಬ್ತು ಬಾಕಿ ಇದೆ.**

ಸಕಾರಣವಿಲ್ಲದೇ ಹಣ ಬಳಕೆ ಮಾಡಲು ಒಪ್ಪದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಕ್ಕೂ ಕಾನೂನಿನಲ್ಲಿ

- **ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ 100 ಕೋಟಿ ರೂ. ಉಳಿಕೆ**
- **ಮುಂದಿನ ವರ್ಷಕ್ಕೆ ಬಳಸಿಕೊಳ್ಳಲು ಡಿಸಿಎಂ ಒಪ್ಪಿಗೆ**
- **ಶಾಸಕರಿಂದಲೇ ನಿಯಮ ಉಲ್ಲಂಘನೆಸ**
- **ಎಸ್‌ಸಿಪಿ,ಟಿಎಸ್‌ಪಿ ವಿಚಾರದಲ್ಲಿ ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು.**
- **ಈ ವರ್ಷ ಶೇ.39ರಷ್ಟು ಹಣ ಮಾತ್ರ ಖರ್ಚು**

ಅವಕಾಶವಿದ್ದರೂ ಅಸ್ತ್ರ ಬಳಸಿಲ್ಲ. ಆದರೆ, ಶಾಸಕರ ನಿಧಿಯ ಎಸ್‌ಸಿಪಿ,ಟಿಎಸ್‌ಪಿ ಭಾಗವೂ ಉಳಿಕೆಯಾಗುತ್ತಿರುವುದು ಈಗ ಚರ್ಚೆಗೆ ಕಾರಣವಾಗಿದೆ. ಗೋವಿಂದ ಕಾರಜೋಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿದೆಯಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೇಟು ಹಾಕಿದ್ದಾರೆ.

**2 ವರ್ಷ ಅವಕಾಶ:** ಈ ಸಂಬಂಧ 'ವಿಕ'ದ ಜತೆಗೆ ಮಾತನಾಡಿದ ಸಾಂಖ್ಯಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್, ''ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಎಸ್‌ಸಿಪಿ, ಟಿಎಸ್‌ಪಿಗೆ ನಿಗದಿಯಾದ ಹಣವನ್ನು ಎರಡು ವರ್ಷದ ಅವಧಿಯಲ್ಲಿ ಬಳಸಲು ಅವಕಾಶವಿದೆ. ನಮ್ಮ ಬಳಿ 100 ಕೋಟಿ ರೂ. ಖರ್ಚಾಗದೇ ಉಳಿದಿದೆ. ಇದನ್ನು ಮುಂದಿನ ವರ್ಷ ಬಳಸಲು ಅವಕಾಶ ನೀಡಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ. ಇದನ್ನು ಹೇಗೆ ಬಳಸಬೇಕೆಂಬ ಬಗ್ಗೆ ಹೊಸದಾಗಿ ಕ್ರಿಯಾಯೋಜನೆ ರಚಿಸಲಾಗುವುದು. ಬಾಕಿ ಇರುವ ಹಣವನ್ನು ಆಯಾ ಜಿಲ್ಲಾಧಿಕಾರಿಗಳ (ಪಿಡಿ ಅಕೌಂಟ್) ಖಾತೆಗೆ ಹಾಕಲಾಗುವುದು ಇದರಲ್ಲಿ ಯಾವುದೇ ಗೊಂದಲವಿಲ್ಲ,'' ಎಂದು ತಿಳಿಸಿದರು.

**ಇನ್ನಿಲ್ಲಿ ಬಾಕಿ:** ವಿಶೇಷ ಉಪಯೋಜನೆ ಹಣ ಬಳಸದ ಇಲಾಖೆಗಳ ಪೈಕಿ ಕಂದಾಯ, ಕೌಶಲ್ಯಾಭಿವೃದ್ಧಿ, ಕೃಷಿ, ಅರಣ್ಯ, ಪಶು ಸಂಗೋಪನೆ, ಆರೋಗ್ಯ, ಲೋಕೋಪಯೋಗಿ ಇಲಾಖೆಗಳು ಮುಂದಿವೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿಗೆ ನಿಯೋಜಿಸಿದ್ದ 4649.82 ಕೋಟಿ ರೂ. ಪೈಕಿ 1150.76 ಕೋಟಿ ರೂ. ಮಾತ್ರ ಬಳಸಿಕೊಳ್ಳಲಾಗಿದೆ. ಪರಿಶಿಷ್ಟ ಪಂಗಡದ 1389.18 ಕೋಟಿ ರೂ.ಪೈಕಿ 515.76 ಕೋಟಿ ರೂ. ಖರ್ಚಾಗಿದೆ. ಹೀಗಾಗಿ ವಿಶೇಷ ಉಪಯೋಜನೆ ಹಣ ಬಳಕೆ ವಿಚಾರದಲ್ಲಿ 'ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?' ಎಂಬ ಪ್ರಶ್ನೆ ಎದುರಾಗಿದೆ.